# ಮರಳಿ ಬಂದ ರವಿ ಶಾಸ್ತ್ರಿ

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಮಧ್ಯರಾತ್ರಿ. ಕಳೆದ ತಿಂಗಳು ಸಂಸತ್ತಿನಲ್ಲಿ ಜಿಎಸ್‌ಟಿ ತೆರಿಗೆ ಜಾರಿಯನ್ನೂ ಮಧ್ಯರಾತ್ರಿ ಪ್ರಕಟಿಸಲಾಯಿತು. ಈಗ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ರವಿಶಾಸ್ತ್ರಿ ಅವರ ಆಯ್ಕೆಯನ್ನೂ ಮಧ್ಯರಾತ್ರಿ ಘೋಷಿಸಲಾಗಿದೆ.

ಭಾರತ ತಂಡದ ಮುಖ್ಯ ಕೋಚ್ ಹುದ್ದೆಯಿಂದ ಅನಿಲ್ ಕುಂಬ್ಳೆ ಬಿಡುಗಡೆ ಹೊಂದಲಿದ್ದಾರೆ ಎನ್ನುವ ಸುದ್ದಿ ತಿಂಗಳ ಮೊದಲೇ ಹರಡಿತ್ತು. ಅದಕ್ಕೆ ಕಾರಣ ಕುಂಬ್ಳೆ ಮತ್ತು ನಾಯಕ ವಿರಾಟ್ ಕೊಹ್ಲಿ ನಡುವಣ ಭಿನ್ನಮತ. ಕೊಹ್ಲಿ ಮನಸ್ಸಿನಲ್ಲಿ ರವಿ ಶಾಸ್ತ್ರಿ ಹೆಸರಿತ್ತು. ಆದರೆ ಹೊಸ ಕೋಚ್ ನೇಮಕವನ್ನು ಮಾಡಬೇಕಾದ ಸಂಪೂರ್ಣ ಅಧಿಕಾರ ಸೌರವ್ ಗಂಗೂಲಿ, ವಿವಿಎಸ್ ಲಕ್ಷ್ಮಣ್ ಮತ್ತು ಸಚಿನ್ ತೆಂಡೂಲ್ಕರ್ ಅವರದ್ದಾಗಿತ್ತು. ಕೋಚ್ ಹುದ್ದೆಗೆ ವೀರೇಂದ್ರ ಸೆಹ್ವಾಗ್ ಮತ್ತು ಟಾಮ್ ಮೂಡಿ ಕೂಡಾ ಸ್ಪರ್ಧೆಯಲ್ಲಿದ್ದರು.

ಈಗ ಮುಂದಿನ ಎರಡು ವರ್ಷಗಳ ಅವಧಿಗೆ ರವಿಶಂಕರ್ ಜಯದ್ರತ ಶಾಸ್ತ್ರಿ ಭಾರತ ತಂಡದ ಕೋಚ್. ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಗೆಲ್ಲುವುದು ಮುಖ್ಯ ಗುರಿ. 55ರ ಹರೆಯದ ರವಿ ಶಾಸ್ತ್ರಿ (ಬರ್ತ್‌ಡೇ 27.5.1962) 2007ರಲ್ಲಿ ಮ್ಯಾನೇಜರ್ ಆಗಿ ಬಾಂಗ್ಲಾ ಪ್ರವಾಸಕ್ಕೆ ಭಾರತ ತಂಡವನ್ನು ಕರೆದೊಯ್ದಿದ್ದರು. ಆ ಬಳಿಕ 2014–16ರ ಅವಧಿಯಲ್ಲಿ ತಂಡದ ಡೈರೆಕ್ಟರ್ ಆಗಿ ಕೆಲಸ ನಿರ್ವಹಿಸಿದ್ದರು. ಈಗ ಮೂರನೇ ಅವಕಾಶ.

ಸದ್ಯಕ್ಕೆ ಕಾಮೆಂಟರಿ ತಜ್ಞರಾಗಿ ಹೆಸರು ಮಾಡಿರುವ ರವಿಶಾಸ್ತ್ರಿ ತಂಡದ ಡೈರೆಕ್ಟರ್ ಆಗಿದ್ದಾಗ, ಭಾರತದ ಸಾಧನೆ ಅತ್ಯುತ್ತಮವಾಗಿಯೇ ಇತ್ತು. ಇಂಗ್ಲೆಂಡ್ ವಿರುದ್ಧ 1–3 ಪಂದ್ಯಗಳ ಸೋಲು ಅನುಭವಿಸಿ, ಡಂಕನ್ ಫ್ಲೆಚರ್ ಕೋಚಿಂಗ್ ಬಗ್ಗೆ ಅಪಸ್ವರಗಳು ಎದ್ದಿದ್ದವು. ರವಿಶಾಸ್ತ್ರಿ ಮೇಲ್ವಿಚಾರಣೆಯಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ಏಕದಿನ ಸರಣಿ ಗೆದ್ದದ್ದಲ್ಲದೆ, 22 ವರ್ಷಗಳಲ್ಲಿ ಮೊದಲ ಬಾರಿಗೆ ಶ್ರೀಲಂಕಾ ವಿರುದ್ಧ ಸರಣಿ ಗೆಲುವು ಸಿಕ್ಕಿತು. ಅದೇ ಅವಧಿಯಲ್ಲಿ ಭಾರತ ಕ್ರಿಕೆಟ್ ತಂಡ ಟೆಸ್ಟ್ ಕ್ರಿಕೆಟ್‌ನಲ್ಲಿ ನಂ.1, ಟಿ20ಯಲ್ಲಿ ನಂ.1 ಮತ್ತು ಏಕದಿನ ರ‍್ಯಾಂಕಿಂಗ್‌ನಲ್ಲಿ ನಂಬರ್ 2 ಸ್ಥಾನಕ್ಕೆ ಏರಿತ್ತು.

ಮುಂಬೈಯ ಮಾಟುಂಗದ ಈ ಹುಡುಗ 6 ಅಡಿ 3 ಇಂಚು ಎತ್ತರದ ಸ್ಫುರದ್ರೂಪಿಯಾಗಿ 'ಲವರ್‌ಬಾಯ್' ಎನ್ನಿಸಿದ್ದ. ಎಡಗೈ ಸ್ಪಿನ್ನರ್ ಆಗಿ ಭಾರತದ ತಂಡ ಪ್ರವೇಶಿಸಿದವರು ರವಿ. ಅದರಲ್ಲೂ ಹತ್ತನೇ ಕ್ರಮಾಂಕದಿಂದ ಬ್ಯಾಟಿಂಗ್ ಶುರು ಮಾಡಿ, ಕೊನೆಗೆ ಆರಂಭಿಕ ಬ್ಯಾಟ್ಸ್‌ಮನ್ ಆಗಿ ಗಟ್ಟಿಯಾದವರು. ಎಲ್ಲ ಕ್ರಮಾಂಕಗಳಲ್ಲೂ ಆಟವಾಡಿದ ಭಾರತದ ಅಪರೂಪದ ಬ್ಯಾಟ್ಸ್‌ಮನ್ ಈತ! ಬಾಲ್ಯದಲ್ಲೇ ಮುಂಬೈಯ ಡಾನ್‌ಬಾಸ್ಕೊ ಕ್ಲಬ್ ತಂಡದ ನಾಯಕನಾಗಿ ಮಿಂಚಿದಾತ. ಪಿಯುಸಿ ಕಲಿಯುತ್ತಿರುವಾಗಲೇ ರಣಜಿ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದ ಅತ್ಯಂತ ಕಿರಿಯ.

'ನಾನು ಪ್ರತಿಭಾವಂತ ಅಲ್ಲ; ಆದರೆ ಶ್ರಮ ಪಟ್ಟು ಮೇಲೇರಿದವ' ಎಂದಿದ್ದರು ಶಾಸ್ತ್ರಿ. ನ್ಯೂಜಿಲೆಂಡ್ ಪ್ರವಾಸದಲ್ಲಿದ್ದ ಭಾರತ ತಂಡದಲ್ಲಿ ಸ್ಪಿನ್ನರ್ ದಿಲೀಪ್ ದೋಶಿ ಹುಷಾರಿಲ್ಲದೆ ಇದ್ದಾಗ, ರಾತೋರಾತ್ರಿ ರವಿಶಾಸ್ತ್ರಿಗೆ ಬುಲಾವ್ ಬಂತು. ರಾತ್ರಿ ಅಲ್ಲಿಗೆ ತಲುಪಿ ಬೆಳಿಗ್ಗೆ ಮೈದಾನಕ್ಕಿಳಿದ ರವಿಶಾಸ್ತ್ರಿ ಆ ಅವಕಾಶದಲ್ಲೇ ಅದ್ಭುತ ಬೌಲಿಂಗ್ ನಡೆಸಿದರು. ಆಗ ತಂಡದಲ್ಲಿ ಹತ್ತನೇ ಆಟಗಾರ. 18 ತಿಂಗಳಲ್ಲಿ ಬ್ಯಾಟಿಂಗ್‌ನಲ್ಲೂ ದಾಖಲೆಗಳನ್ನು ಸಾಧಿಸಿ ಆರಂಭಿಕ ಆಟಗಾರನಾದದ್ದು ಸಣ್ಣ ಸಾಧನೆಯೇನಲ್ಲ.

ಪಾಕಿಸ್ತಾನದ ಅಪಾಯಕಾರಿ ಬೌಲರ್ ಇಮ್ರಾನ್ ಖಾನ್ ದಾಳಿಯನ್ನು ಎದುರಿಸಿ ಶತಕ ಹೊಡೆದದ್ದು, ಮೊದಲ ದರ್ಜೆ ಕ್ರಿಕೆಟ್‌ನಲ್ಲಿ ಓವರ್‌ನ ಆರೂ ಎಸೆತಗಳನ್ನು ಸಿಕ್ಸರ್‌ಗೆ ಬಾರಿಸಿ ಗ್ಯಾರಿ ಸೋಬರ್ಸ್ ದಾಖಲೆ ಸರಿಗಟ್ಟಿದ್ದು, 1984ರ ಪಾಕಿಸ್ತಾನ ಪ್ರವಾಸದಲ್ಲಿ ಭಾರತ 92ಕ್ಕೆ ಆರು ವಿಕೆಟ್ ಕಳೆದುಕೊಂಡು ಕುಸಿದಿದ್ದಾಗ 71ರನ್ ಹೊಡೆದು, ಮೊಹಿಂದರ್ ಅಮರನಾಥ್ ಜತೆ 126 ರನ್‌ಗಳ ಜೊತೆಯಾಟ ನೀಡಿದ್ದು, ಏಕದಿನ ಪಂದ್ಯದಲ್ಲಿ ಆರಂಭಿಕ ಆಟಗಾರನಾಗಿ ಶತಕ ಹೊಡೆದದ್ದು, ಮೊದಲ ದರ್ಜೆ ಪಂದ್ಯದಲ್ಲಿ ಅತ್ಯಂತ ವೇಗದ ಡಬಲ್ ಸೆಂಚುರಿ ಹೊಡೆದದ್ದು– ಹೀಗೆ ಹಲವು ದಾಖಲೆಗಳನ್ನು ಪಟ್ಟಿ ಮಾಡಬಹುದು.

ಬಲಗೈ ಬ್ಯಾಟ್ಸ್‌ಮನ್ ಶಾಸ್ತ್ರಿಯ 'ಚಪಾತಿ ಶಾಟ್'ಗಳನ್ನು ಈಗಲೂ ಹಳಬರು ನೆನಪಿಸಿಕೊಳ್ಳುತ್ತಾರೆ. ಆಫ್ ಸೈಡ್‌ಗೆ ಚೆಂಡನ್ನು ತಳ್ಳಿ ರನ್ ಕದಿಯುವುದೇ ಚಪಾತಿ ಶಾಟ್! ಎತ್ತರ ಇದ್ದುದರಿಂದ ವೇಗದ ಬೌಲರ್‌ಗಳ ವಿರುದ್ಧ ನಿಧಾನಕ್ಕೆ ಆಡಿ ಸ್ಪಿನ್ನರ್‌ಗಳು ಬಂದ ಮೇಲೆ ಸಿಕ್ಸರ್, ಬೌಂಡರಿ ಬಾರಿಸುವ ತಂತ್ರ ಶಾಸ್ತ್ರಿಯದ್ದು. ಇದರಿಂದಾಗಿ ಸ್ವಾರ್ಥಿ ಎಂಬ ಟೀಕೆಯೂ ಬಂದಿತ್ತು. 'ಗಾವಸ್ಕರ್ ರಕ್ಷಣೆ ಇಲ್ಲದಿದ್ದಲ್ಲಿ ಶಾಸ್ತ್ರಿ 11 ವರ್ಷಗಳಷ್ಟು ದೀರ್ಘ ಕಾಲ ಭಾರತ ತಂಡದಲ್ಲಿ ಇರುತ್ತಿರಲಿಲ್ಲ' ಎನ್ನುವವರೂ ಇದ್ದಾರೆ.

ಕಪಿಲ್‌ದೇವ್ ನಾಯಕತ್ವದಲ್ಲಿ ವೈಸ್ ಕ್ಯಾಪ್ಟನ್ ಆಗಿದ್ದ ರವಿಶಾಸ್ತ್ರಿ ಇನ್ನೇನು ಕ್ಯಾಪ್ಟನ್ ಆಗಬೇಕು ಎನ್ನುವಷ್ಟರಲ್ಲಿ ದಿಲೀಪ್ ವೆಂಗಸರ್ಕಾರ್ ಬ್ಯಾಟಿಂಗ್‌ನಲ್ಲಿ ಮಿಂಚತೊಡಗಿ ಕ್ಯಾಪ್ಟನ್ ಆದರು. ವೆಂಗಸರ್ಕಾರ್ ಪಂದ್ಯದಲ್ಲಿ ಗಾಯಗೊಂಡಾಗ ಒಂದು ಟೆಸ್ಟ್‌ನಲ್ಲಿ ಮಾತ್ರ ನಾಯಕತ್ವ ದೊರಕಿತು. ನರೇಂದ್ರ ಹಿರ್ವಾನಿ ಆ ಪಂದ್ಯದಲ್ಲಿ ಒಟ್ಟು 16 ವಿಕೆಟ್ ಕಬಳಿಸಿ ಭಾರತಕ್ಕೆ ಗೆಲುವು ತಂದುಕೊಟ್ಟರು. ಆದರೆ ಶಾಸ್ತ್ರಿ ಬೌಲಿಂಗ್, ಬ್ಯಾಟಿಂಗ್ ಎರಡರಲ್ಲೂ ವಿಫಲರಾದರು. ಆ ಬಳಿಕ ವೆಂಗಸರ್ಕಾರ್ ಪತ್ರಿಕೆಗಳಿಗೆ ಅಂಕಣ ಬರೆದದ್ದಕ್ಕೆ ತಂಡದಿಂದ 6 ತಿಂಗಳ ಮಟ್ಟಿಗೆ ಸಸ್ಪೆಂಡ್ ಆದರು. ಮೂರು ದೇಶಗಳ ಟೂರ್ನಿಯಲ್ಲಿ ಶಾಸ್ತ್ರಿ ಕ್ಯಾಪ್ಟನ್ ಆಗಿ ಪ್ರಶಸ್ತಿ ಗೆದ್ದರು. ಆದರೆ ವೆಸ್ಟ್ ಇಂಡೀಸ್‌ನ ಜತೆಗಿನ ಏಕದಿನ ಸರಣಿಯಲ್ಲಿ ಭಾರತ ಎಂಟರಲ್ಲಿ ಏಳು ಪಂದ್ಯಗಳಲ್ಲಿ ಸೋತಿತು. ಅದರಲ್ಲಿ ಆರು ಪಂದ್ಯಗಳಿಗೆ ಶಾಸ್ತ್ರಿಯೇ ಕ್ಯಾಪ್ಟನ್ ಆಗಿದ್ದರು. ಜತೆಗೇ ಮಂಡಿನೋವು ಕಾಡಿ ತಂಡಕ್ಕೆ ಟಾಟಾ ಹೇಳಬೇಕಾಯಿತು.

ಈಗ ಬೌಲಿಂಗ್ ಕೋಚ್ ಆಗಿ 'ಗಂಗೂಲಿಯ ಶಿಷ್ಯ' ಜಹೀರ್‌ಖಾನ್ ಜತೆಗಿದ್ದಾರೆ. ವಿದೇಶಗಳ ಪಂದ್ಯಗಳಲ್ಲಿ ಬ್ಯಾಟಿಂಗ್ ಕನ್ಸಲ್ಟೆಂಟ್ ಆಗಿ ರಾಹುಲ್ ದ್ರಾವಿಡ್ ಆಯ್ಕೆಯಾಗಿದ್ದಾರೆ. 'ಹಾಗಿದ್ದ ಮೇಲೆ ಕೋಚ್ ಅಗತ್ಯವೇನಿದೆ?' ಎಂದೂ ಕೆಲವರು ಪ್ರಶ್ನಿಸಿದ್ದಾರೆ. ಹಾಗೆಂದು ರವಿ ಶಾಸ್ತ್ರಿ ಅನುಭವವನ್ನು ತಳ್ಳಿಹಾಕಲಾಗದು. ಸೋಲು ಮತ್ತು ಗೆಲುವು ಎರಡೂ ಅನುಭವಗಳು ರವಿಶಾಸ್ತ್ರಿ ಬೆನ್ನಿಗಿವೆ. ಆ ಅನುಭವ ಭಾರತಕ್ಕೆ ಮತ್ತೆ ವಿಶ್ವಕಪ್ ದೊರಕಿಸಿದರೂ ಅಚ್ಚರಿಯಿಲ್ಲ.




Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65